ಉದಾಹರಣೆಗಳಿವೆ. ವಚನಕಾರರು ಬದ್ಧತೆ ಮತ್ತು ಶ್ರೇಷ್ಠ ಕಲಾತ್ಮಕತೆಯನ್ನು ಎಷ್ಟೊಂದು ಸಶಕ್ತವಾಗಿ ನುಡಿಸಿದ್ದಾರಲ್ಲವೆ? ಅಲ್ಲಮನ ವಚನಗಳ ನೆನೆಯಿರಿ. ಅಭಿವ್ಯಕ್ತಿಯನ್ನು ಮಾಡಲು ಹೊರಟ ಪ್ರತಿ ಒಬ್ಬ ಲೇಖಕರಿಗೂ ಅವರ ತರಹದ್ದೇ ಆದ ಅವ್ಯಕ್ತ ಕಾಲಬದ್ಧತೆ ಇರುತ್ತದೆ. ಆದರೆ ಲೇಖಕ ಬದ್ಧತೆಯು ಕೈಕಡಗಗಳನ್ನು ಹಾಕಿಕೊಳ್ಳಬಾರದು. ನೀವು ಸುಮ್ಮನೆ ಅಬ್ದುಲ್ ರಶೀದ್ ಅವರ ಬರಹಗಳನ್ನು ಗಮನಿಸಿ. ಅವರ ಬರಹದಲ್ಲಿ ಕಲೆಯೂ ಬದ್ಧತೆಯೂ ಅವ್ಯಕ್ತವಾಗಿ ಲೀನವಾಗಿವೆ. ದೇವನೂರ ಮಹಾದೇವ ಅವರಿಗೆ ಇರುವಷ್ಟು ಬದ್ಧತೆ ಇನ್ನಾರಿಗಿದೆ. ಆದರೆ ಅವರ ಬದ್ಧತೆ ಅವರನ್ನು ಕಟ್ಟಿಹಾಕಿಲ್ಲ. ನನಗೆ ಬದ್ಧತೆ ಇಲ್ಲವೇ? ಬದ್ಧತೆಯು ಮಾವಿನ ಹಣ್ಣಿನ ಒಳಗಿನ ಬೀಜದಂತಿರಬೇಕು. ಹಣ್ಣನ್ನು ತಿಂದು ವಾಟೆಯನ್ನು ಬಿಸಾಡುವಂತಿರಬೇಕು. ಬಿಸಾಡಿದ ಆ ಬೀಜ ಮತ್ತೆ ಜೀವ ಕಾಣುವಂತೆ ಬರಹವನ್ನು ಮಾಡಬೇಕು.



**◆ ಕನ್ನಡದಲ್ಲಿ ಈಗ ದೊಡ್ಡ ಪ್ರಮಾಣದ ದಲಿತ ವಿಮರ್ಶೆ ಬಂದಿದೆ. ಕನ್ನಡದ ಓದಿನ ಕ್ರಮವನ್ನು ಬದಲಾಯಿಸಿದೆ. ನೀವು ಕೂಡ ದಲಿತ ವಿಮರ್ಶೆಯನ್ನು ವಿಸ್ತರಿಸಿದವರು. ನಿಮ್ಮನ್ನೂ ಸೇರಿದಂತೆ ಯಾವ ಸೈದ್ಧಾಂತಿಕತೆ ದಲಿತ ವಿಮರ್ಶೆಯನ್ನು ರೂಪಿಸಿದೆ? ಇದಕ್ಕೂ ಬದ್ಧತೆಯ ಅಂಕುಶ ಇದೆಯೆಂದು ಅನ್ನಿಸುವುದಿಲ್ಲವೆ?**

ವಿಮರ್ಶೆಯ ಹಲವು ಧಾರೆಗಳು ಕನ್ನಡದಲ್ಲಿವೆ. ನವೋದಯ ಕಾಲದಲ್ಲಿ ರಸ ವಿಮರ್ಶೆ ಮುನ್ನೆಲೆಯಲ್ಲಿತ್ತು. ಪ್ರಗತಿಶೀಲರ ಕಾಲದಲ್ಲಿ ವಿಮರ್ಶೆಯೇ ಇರಲಿಲ್ಲ. ನವ್ಯ ಸಾಹಿತ್ಯ ಬಂದ ಕೂಡಲೆ ಪಶ್ಚಿಮದ ಎಫ್.ಆರ್. ಲಿವೀಸ್ ಮುಂತಾದ ಇಂಗ್ಲೆಂಡಿನ ಗಣ್ಯ ವಿಮರ್ಶಕರ ಹಾಗೂ ತತ್ವಜ್ಞಾನಿಗಳ ವೈಚಾರಿಕ ಪ್ರಮೇಯಗಳನ್ನು ತಂದು ತಮ್ಮ ನವ್ಯ ಕಾವ್ಯಕ್ಕೆ ತಕ್ಕಂತೆ ವಿಮರ್ಶೆ ಮಾಡಿಕೊಂಡರು. ಅದು ಅತಿ ಎನಿಸುವಾಗ ದಲಿತ ಬಂಡಾಯ ಹುಟ್ಟಿಕೊಂಡವು. ಸಹಜವಾಗಿಯೇ ಹೋರಾಟದ ಭಾಗವಾಗಿ ಚಳವಳಿಯ ಪರಿಭಾಷೆಗಳಲ್ಲಿ ಪರ್ಯಾಯ ವಿಮರ್ಶೆಯನ್ನು ಎತ್ತಿ ಹಿಡಿದರು. ಸಾಮಾಜಿಕ ನ್ಯಾಯದ ಮಾನದಂಡಗಳಾದ ಸಮಾನತೆಯ ಮಾತುಗಳು ಮೊಳಗಿದವು. ವಿಮರ್ಶೆಯಲ್ಲಿ ಮಾರ್ಕ್ಸ್‌ವಾದ ಮೊಳಗಿತು. ದಲಿತ ವಿಮರ್ಶೆ ನ್ಯಾಯದ ಹಕ್ಕೊತ್ತಾಯವನ್ನು ಜಾತ್ಯತೀತ ಸಂಬಂಧಗಳನ್ನು ಮುಖ್ಯ ಎಂದು ಸಮಾಜ ವಿಜ್ಞಾನ ಮತ್ತು ರಾಜಕೀಯ ಪ್ರಜ್ಞೆಯನ್ನು ಪ್ರತಿಧ್ವನಿಸಿತು. ಬಸವಲಿಂಗಪ್ಪ ಅವರು ಬೂಸಾ ಸಾಹಿತ್ಯ ಎಂದು ಕನ್ನಡ ಸಾಹಿತ್ಯವನ್ನು ಹಂಗಿಸಿದ್ದರಲ್ಲೇ ದಲಿತ ವಿಮರ್ಶೆ ಮೊದಲ ಬಾರಿಗೆ ಧ್ವನಿಸಿತು. ಅದರಿಂದಾಗಿಯೇ ನಾನು 'ತಕರಾರು' ಬರೆಯಲು ಸಾಧ್ಯವಾದದ್ದು. ದಲಿತ ವಿಮರ್ಶೆ ಇನ್ನೂ ಒಂದು ಸ್ಕೂಲ್ ಆಫ್ ಥಾಟ್ ಆಗಿರಲಿಲ್ಲ. 'ಎದೆಗೆ ಬಿದ್ದ ಅಕ್ಷರ'ಕ್ಕೂ 'ತಕರಾರು', 'ಜಾತಿ ಮೀಮಾಂಸೆ' ಕೃತಿಗಳಿಗೂ ತುಂಬಾ ವ್ಯತ್ಯಾಸಗಳಿವೆ. ಅರವಿಂದ ಮಾಲಗತ್ತಿ ಕೂಡ ದಲಿತ ವಿಮರ್ಶೆಯಲ್ಲಿ ಬರಹ ಮಾಡಿದ್ದಾರೆ. ಕೋಟಿಗಾನಹಳ್ಳಿ ರಾಮಯ್ಯ ಅವರ ವಿಮರ್ಶೆಗೆ ಶಿಸ್ತು ಇಲ್ಲ. ದಲಿತ ವಿಮರ್ಶೆ ಹೆಚ್ಚಾಗಿ ಅಂಬೇಡ್ಕರ್ ಅವರ ವಿಚಾರಗಳನ್ನು ಆಶ್ರಯಿಸಿದೆ. ಅಲ್ಲಲ್ಲಿ ಬುದ್ಧತ್ವವನ್ನು ಅಳವಡಿಸಿಕೊಳ್ಳುತ್ತಿದೆ. ಮೂಡ್ನಾಕೂಡು ಚಿನ್ನಸ್ವಾಮಿ ಆ ಹಾದಿಯಲ್ಲಿ ಅಂಬೆಗಾಲಿಟ್ಟಿದ್ದಾರೆ. ದಲಿತ ವಿಮರ್ಶೆಯನ್ನು ದಲಿತೇತರರೂ ಮಾಡಿದ್ದಾರೆ. ಜಾತ್ಯತೀತತೆಯನ್ನು ದಲಿತ ವಿಮರ್ಶೆ ಮುಖ್ಯ ಬೇರಾಗಿಸಿಕೊಂಡಿದೆ. 'ಜಾತಿ ಮೀಮಾಂಸೆ', 'ತಕರಾರು' ಕೃತಿಗಳಲ್ಲಿ ಭಗ್ನಪಡಿಸುತ್ತ ನಾನು ಜಾತ್ಯತೀತತೆಯ ಅರಣ್ಯರೋದನ ಮಾಡಿದೆ. ಕನ್ನಡ ಸಾಹಿತ್ಯದ ಅನೇಕರು ಮೊಗಳ್ಳಿ ವಿಮರ್ಶೆಯು ವಿಮರ್ಶೆಯೇ ಅಲ್ಲ ಎಂದು ನಿರಾಕರಿಸಿದರು. ಅದರಿಂದ ನಾನು ಇನ್ನಷ್ಟು ಗಟ್ಟಿ ಆದೆ.

**ಕಥೆಯ ರೀತಿನೀತಿಗಳ ಅನುಸರಿಸಿ ನಾನು ಕಥೆ ಬರೆಯುವವನಲ್ಲ. ಮಳೆ ಬಂದು ಹೊಳೆ ಹರಿದಂತೆ ನನ್ನ ಕಥನ ಯಾನ ಸಾಗುತ್ತದೆ.**